

ಮೆದುಳು ನಿಷ್ಕ್ರಿಯಗೊಂಡ ನಂತರ ಅಂಗಾಂಗ ದಾನದ ಪ್ರಕ್ರಿಯೆ ಶುರುವಾಗುತ್ತದೆ...

### ಹೆಚ್ಚುತ್ತಿದೆ ಬೇಡಿಕೆ

ನಮ್ಮಲ್ಲಿ ಅಂಗಾಂಗ ಅಗತ್ಯ ಇರುವವರ ಸಂಖ್ಯೆ ಅತ್ಯಧಿಕವಾಗಿದ್ದು, ದಾನಿಗಳ ಸಂಖ್ಯೆ ಬಹಳ ಕಡಿಮೆ ಇದೆ. ಈ ಕೊರತೆಯ ಕಾರಣದಿಂದಲೂ ವಾರ್ಷಿಕವಾಗಿ ಸುಮಾರು ಐವತ್ತು ಸಾವಿರ ಮಂದಿ ಅಸು ನೀಗುತ್ತಿದ್ದಾರೆ.

‘ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ’ಯ (National organ and tissue transplant organization NOTTO) ಅಂಕಿ ಅಂಶಗಳ ಪ್ರಕಾರ, ನಮ್ಮ ದೇಶದಲ್ಲಿ ವರ್ಷಕ್ಕೆ ಎರಡು ಲಕ್ಷ ನೇತ್ರ ದೇಣಿಗೆಯ ಅಗತ್ಯವಿದೆ. ಆದರೆ ಸಂಗ್ರಹವಾಗುವ ಕಣ್ಣುಗಳ ಸಂಖ್ಯೆ 50 ಸಾವಿರಕ್ಕಿಂತಲೂ ಕಡಿಮೆ. ಹೀಗಾಗಿ ಕಾರ್ನಿಯಾ ದಾನ ಪಡೆಯಲು ಕಾಯುತ್ತಿರುವ 4 ಜನರಲ್ಲಿ 3 ಜನರು ದೃಷ್ಟಿಹೀನತೆ ಸಮಸ್ಯೆಯಿಂದ ಹಾಗೇ ಉಳಿಯುವಂತಾಗಿದೆ.

ಕರ್ನಾಟಕದಲ್ಲಿ ಅಂಗಾಂಗ ದಾನದ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ನಿಧಾನವಾಗಿ ಜಾಗೃತಿ ಮೂಡುತ್ತಿದೆ. 2022ರಲ್ಲೇ ಈವರೆಗೆ 122 ಮಂದಿ ಅಂಗಾಂಗಗಳನ್ನು ದಾನ ಮಾಡಿದ್ದಾರೆ. ‘ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ’ಯಡಿ (State organ and Tissue Transplant organization SOTTO) ಈವರೆಗೆ ಅಂಗಾಂಗ

# ಮೆದುಳು ನಿಷ್ಕ್ರಿಯ ಆಗುವುದು ಹೇಗೆ?

-ಡಾ. ಕೃಷ್ಣನ್ ಪಿ.ಆರ್.
ನರರೋಗ ತಜ್ಞರು, ಫೋರ್ಟಿಸ್ ಆಸ್ಪತ್ರೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು




ಸಂದರ್ಶನ

**◆ ಅಪಘಾತದಲ್ಲಿ ತೀವ್ರ ಗಾಯಗೊಂಡ ವ್ಯಕ್ತಿಯ ಬ್ರೈನ್ ಡೆಡ್ ಎಂದು ವೈದ್ಯರು ಯಾವಾಗ ಘೋಷಿಸುವರು?**

ಕೆಲವು ಭೀಕರ ಅಪಘಾತ ಪ್ರಕರಣಗಳಲ್ಲಿ ಮೆದುಳಿಗೆ ತೀವ್ರ ಪೆಟ್ಟು ಬಿದ್ದು, ವ್ಯಕ್ತಿ ಕೋಮಾಗೆ ಹೋಗಬಹುದು. ಆ ಸಂದರ್ಭದಲ್ಲಿ ವೈದ್ಯರು ಎಲ್ಲ ರೀತಿಯ ಪರೀಕ್ಷೆ ನಡೆಸಿ, ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ ಅಂತಿಮವಾಗಿ ಬ್ರೈನ್ ಡೆಡ್ ಎಂದು ಘೋಷಿಸುವರು. ತುರ್ತು ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಿ ಜೀವ ಉಳಿಸುವ ಪ್ರಯತ್ನವನ್ನೂ ಮಾಡಿ, ಸರಿಹೋಗದಿದ್ದಾಗ ಅಸಹಾಯಕರಾಗಿ ಮೆದುಳು ನಿಷ್ಕ್ರಿಯ ಎಂದು ಘೋಷಿಸಬೇಕಾಗುತ್ತದೆ.

**◆ ಮೆದುಳು ನಿಷ್ಕ್ರಿಯ ಎಂದು ವೈದ್ಯರು ಸಾರುವ ಮುನ್ನ ಏನೇನು ಪರೀಕ್ಷೆಗಳಿರುತ್ತವೆ?**

ಪ್ರಮುಖವಾಗಿ ಉಸಿರಾಟ ನಿಂತಿರುವ ಬಗ್ಗೆ ತಿಳಿದುಕೊಳ್ಳಲು ಎಥ್ನಿಯಾ ಟೆಸ್ಟ್ ಮಾಡಲಾಗುತ್ತದೆ. ಕಣ್ಣಲ್ಲಿರುವ ಗುಡ್ಡೆಗಳ ಪರೀಕ್ಷೆ, ಹೃದಯದ ಆ್ಯಂಜಿಯೊಗ್ರಾಮ್ ಸೇರಿದಂತೆ ಮೆದುಳಿನ ಕಾರ್ಯಚಟುವಟಿಕೆ ಬಗ್ಗೆ ಸಂಪೂರ್ಣ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಗಾಯಗೊಂಡು ಆರು ಗಂಟೆಗಳವರೆಗೂ ಮೆದುಳಿನಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ ಇಬ್ಬರು ನರರೋಗ ತಜ್ಞರು ಅಂತಿಮವಾಗಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳುವರು.

**◆ ವ್ಯಕ್ತಿಯ ಮೆದುಳು ನಿಷ್ಕ್ರಿಯವಾದರೂ ಹೃದಯ ಬಡಿತ ಹಾಗೆಯೇ ಇರುತ್ತದೆ ಎಂದಿರಿ. ಆದರೂ ವ್ಯಕ್ತಿ ಮೃತನಾದ ಎಂದು ಘೋಷಿಸಲಾಗುತ್ತದೆಯಲ್ಲವೇ?**

ಹೌದು. ಬ್ರೈನ್ ಡೆಡ್ ಆದ ವ್ಯಕ್ತಿಯ ಹೃದಯದ ಬಡಿತ ಸ್ವಲ್ಪ ಹೊತ್ತು ಎಂದಿನಂತೆ ಇದ್ದರೂ ಆತ ಬದುಕಿ ಉಳಿದ ಎಂದರ್ಥವಲ್ಲ. ವೈದ್ಯವಿಜ್ಞಾನದಲ್ಲಿ ಇದನ್ನು ಸಾವೆಂದೇ ಪರಿಗಣಿಸಲಾಗುತ್ತದೆ. ಹೀಗಾಗಿ ಇಂಥ ವ್ಯಕ್ತಿಯ ಹೃದಯವನ್ನು ಅಂಗಾಂಗ ದಾನ ಮಾಡಬಹುದು ಎನ್ನುತ್ತೇವೆ. ಆದರೂ ವೈದ್ಯಕೀಯ ಲೋಕದಲ್ಲಿ ಈ ವ್ಯಕ್ತಿ ಸತ್ತಿದ್ದಾನೆಂದೇ ಪರಿಗಣಿಸಲಾಗುವುದು.

**◆ ಮೆದುಳು ನಿಷ್ಕ್ರಿಯವಾಗಲು ವಯಸ್ಸಿನ ಹಂಗೇನಾದರೂ ಇದೆಯೇ?**

ಖಂಡಿತ ಇಲ್ಲ. ಯಾವುದೇ ವಯಸ್ಸಿನಲ್ಲಿ ಮೆದುಳು ನಿಷ್ಕ್ರಿಯವಾಗಬಹುದು. ಅಪಘಾತ ಹೇಳಿಕೇಳಿ ಸಂಭವಿಸುವುದಿಲ್ಲ. ಇಂಥ ಸಂದರ್ಭದಲ್ಲಿ ತೀವ್ರವಾಗಿ ತಲೆಗೆ ಪೆಟ್ಟು ಬಿದ್ದಾಗ ಮೆದುಳು ಕೆಲಸ ನಿಲ್ಲಿಸಬಹುದು. ಇದೇ ರೀತಿ ಸ್ಟ್ರೋಕ್, ಹೃದಯಾಘಾತ, ಯಾವ ವಯಸ್ಸಿನಲ್ಲಾದರೂ ಬರಬಹುದು.

**◆ ಮೆದುಳು ನಿಷ್ಕ್ರಿಯವಾದ ವ್ಯಕ್ತಿಯ ಕೆಲವು ಅಂಗಗಳು ದಾನ ಮಾಡಲು ಯೋಗ್ಯವಾಗಿರುತ್ತವೆ. ಇದಕ್ಕೇನಾದರೂ ನಿರ್ದಿಷ್ಟ**